**69 ನೇ ಹೆಚ್ಚುವರಿ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರ,**
**ನ್ಯಾಯಾಂಗಣ (70), ಬೆಂಗಳೂರು**
**ಎಸ್.ಸಿ.ನಂ.1314 /14**

ಸಾಕ್ಷಿಗೆ ಪ್ರಮಾಣ ವಚನಃ ಭೋದಿಸಲಾಗಿದೆ.
ದಿನಾಂಕ:08/03/2019

ಪಿಡಬ್ಲ್ಯೂಃ 8
ಸಿಡಬ್ಲ್ಯೂಃ 18

| | | |
|---|---|---|
| ಹೆಸರು | ಃ | ಪ್ರೇಮಕುಮಾರಿ |
| ಗಂಡನ ಹೆಸರು | ಃ | ನಾಗರಾಜ |
| ವಯಸ್ಸು | ಃ | 61ವರ್ಷಗಳು |
| ಉದ್ಯೋಗ | ಃ | ನಿವೃತ್ತ ಪಿಎಸ್ಐ |
| ವಿಳಾಸ | ಃ | ಕುಮಾರ ಸ್ವಾಮಿ ಲೇಔಟ್, ಬೆಂಗಳೂರು. |

**ಮುಖ್ಯ ವಿಚಾರಣೆ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರಿಂದಃ**

ನಾನು ಜುಲೈ 2011 ರಿಂದ ಸೆಪ್ಟಂಬರ್ 2016 ರವರೆಗೆ ಬನಶಂಕರಿ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

ದಿ.21.06.2014ರಂದು ನಾನು ಠಾಣಾ ಎಸ್‌ಹೆಚ್‌ಓ ಕರ್ತವ್ಯದಲ್ಲಿರುವಾಗ ಮಧ್ಯಾಹ್ನ 1.30ಕ್ಕೆ ಪಿರ್ಯಾದುದಾರರು ಠಾಣೆಗೆ ಹಾಜರಾಗಿ ತಮ್ಮ ಮಗನನ್ನು ಅಪಹರಿಸಿದ್ದಾರೆ ಎಂದು ನೀಡಿದ್ದ ಒಂದು ಲಿಖಿತ ಪಿರ್ಯಾದನ್ನು ಸ್ವೀಕರಿಸಿ ಠಾಣಾ ಮೊ.ಸಂ.161/14 ಪ್ರಕರಣವನ್ನು ದಾಖಲಿಸಿ ಪ್ರ.ವ.ವನ್ನು ತಯಾರಿಸಿ ಮಾನ್ಯ ನ್ಯಾಯಾಲಯ ಹಾಗೂ ಮೇಲಾಧಿಕಾರಿಗಳಿಗೆ ರವಾನಿಸಿರುತ್ತೇನೆ. ಪಿರ್ಯಾದು ಹಾಗೂ

ಪ್ರ.ವ.ವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಪಿರ್ಯಾದನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದೂ, ಪ್ರ,ವ.ವನ್ನು ನಿ.ಪಿ.30 ಎಂದೂ, ಸಾಕ್ಷಿಯ ಸಹಿಯನ್ನು ನಿ.ಪಿ.30(ಎ) ಎಂದು ಗುರುತಿಸಲಾಯಿತು.

ನಂತರ ಮುಂದಿನ ತನಿಖೆಯನ್ನು ಚಾಸಾ19ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀಟಿಎಸ್ ವಕೀಲರಿಂದಃ**

ಪಿರ್ಯಾದಿ ಲಿಖಿತ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ಪಿರ್ಯಾದಿಗೆ ಸಹಾಯ ಮಾಡಲು ದೂರನ್ನು ನಾನೇ ತಯಾರಿಸಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಗಿದೆ.)

ಓ.ಹೇ.ಕೇ.ಸ.ಇದೆ

**( ಟಿ.ಪಿ.ರಾಮಲಿಂಗೇಗೌಡ)**
**69ನೇ ಅಪರ ನಗರ ಸಿವಿಲ್**
**ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**